ಸಣ್ಣ ಉಳಿತಾಯದಲ್ಲಿ ಹಣ ತೊಡಗಿಸುವವರಿಗೆ ಪ್ರೋತ್ಸಾಹ ಧನ ನೀಡುವುದು

2450 (2804) ಶ್ರೀ ವಿ. ಸೋಮಣ್ಣ (ಬನ್ನಿಪೇಟೆ) :— ಮಾನ್ಯ ಸಣ್ಣ ಉಳಿತಾಯ, ಮುಜರಾಯಿ ಮತ್ತು ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಣ್ಣ ಉಳಿತಾಯ ಇಲಾಖೆಯ ಎನ್.ಎಸ್.ಸಿ ಯೋಜನೆಯಲ್ಲಿ ಹಣ ತೊಡಗಿಸುವ ವ್ಯಕ್ತಿಗಳಿಗೆ ಪ್ರೋತ್ಸಾಹ ಧನವನ್ನು ನೀಡುತ್ತಿರುವ ವ್ಯವಸ್ಥೆ ಜಾರಿಯಲ್ಲಿದೆಯೇ?

ಆ) ಹಾಗಿದ್ದಲ್ಲಿ, 50,000 ರೂಪಾಯಿಗಳಿಗೂ ಮೇಲ್ಪಟ್ಟು ಹಣ ತೊಡಗಿಸುವ ವ್ಯಕ್ತಿಗಳಿಗೆ ಕಳೆದ ಎರಡು ವರ್ಷಗಳಿಂದಲೂ ಪ್ರೋತ್ಸಾಹ ಧನ ನೀಡದಿರಲು ಕಾರಣಗಳೇನು?

ಶ್ರೀ ಬಾಬುರಾವ್ ಚಿಂಚನಸೂರು (ಸಣ್ಣ ಉಳಿತಾಯ, ಮುಜರಾಯಿ ಹಾಗೂ ವಿಮೆ ರಾಜ್ಯ ಸಚಿವರು) :—

ಅ) ದಿನಾಂಕ : 1-4-2001 ರಿಂದ ಈ ಯೋಜನೆ ಜಾರಿಯಲ್ಲಿಲ್ಲ.

1999-2000 ಮತ್ತು 2000-01ನೇ ಸಾಲಿನಲ್ಲಿ, ವೈಯಕ್ತಿಕ ಠೇವಣಿದಾರರಿಗೆ ಸರ್ಕಾರವು ಜಾರಿ ಮಾಡಿದ ಪ್ರೋತ್ಸಾಹ ಬಹುಮಾನ ಯೋಜನೆಯನ್ವಯ ಸ್ವೀಕರಿಸಿದ ಕ್ಲೇಂಗಳನ್ನು ಜೇಷ್ಠತೆಯ ಆಧಾರದ ಮೇಲೆ ಪಾವತಿ ಮಾಡಲಾಗುತ್ತಿದೆ.

ಮಳವಳ್ಳಿ ತಾಲ್ಲೂಕಿನಲ್ಲಿ ಬೀಟ್ ಪೋಸ್ಟ್ ಅರಕ್ಷಕ ಠಾಣೆಗಳನ್ನು ಮೇಲ್ದರ್ಜೆಗೇರಿಸುವುದು

2452 (2869) ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಮೇಲ್ದರ್ಜೆಗೇರಿಸಿರುವ ಬೀಟ್ ಪೋಸ್ಟ್ ಅರಕ್ಷಕ ಠಾಣೆಗಳ ಸಂಖ್ಯೆ ಎಷ್ಟು ;

ಆ) ಮಳವಳ್ಳಿ ತಾಲ್ಲೂಕಿನ ಪೂರಿಗಾಲಿ ಗ್ರಾಮದಲ್ಲಿ ಒಂದು ಅರಕ್ಷಕ ಠಾಣೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಾರಂಭಿಸುವ ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇದನ್ನು ಇಲಾಖೆಯ ಅಧಿಕಾರಿಗಳು ಮನಗಂಡು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆಯೇ;

ಈ) ಹಾಗಿದ್ದಲ್ಲಿ ಇದನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) ಎರಡು

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.